# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 134(147) |
| ಮಾನ್ಯ ಸದಸ್ಯರ ಹೆಸರು | | ಡಾ|| ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | | 15.07.2024 |
| ಉತ್ತರಿಸುವ ಸಚಿವರು | | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |
| ಕ್ರ. ಸಂ | ಪ್ರಶ್ನೆ | ಉತ್ತರ |
| (ಅ) | ಸರ್ಕಾರದ ಆಹಾರ ಸುರಕ್ಷತಾ ಇಲಾಖೆ ಅಡಿ ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳೆಷ್ಟು; (ವೃಂದವಾರು ವಿವರ ನೀಡುವುದು) | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಲ್ಲಿ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಮಂಜೂರಾದ ಹುದ್ದೆ, ಕರ್ತವ್ಯ ನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ವೃಂದವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ. |
| (ಆ) | ರಾಜ್ಯದಲ್ಲಿ ಆಹಾರ ಕಲಬೆರಿಕೆ ತಡೆಯಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಈ ಕಾರ್ಯಕ್ರಗಳಿಗೆ ರಾಜ್ಯ ಸರ್ಕಾರ ಒದಗಿಸಿರುವ ಅನುದಾನದ ಮಾಹಿತಿ ನೀಡುವುದು; ಈ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ; ಇದ್ದಲ್ಲಿ, ಈವರೆಗೆ ಎಷ್ಟು ಅನುದಾನ ಒದಗಿಸಲಾಗಿದೆ; (ವರ್ಷಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಆಹಾರ ಕಲಬೆರಿಕೆ ತಡೆಯಲು ಕಾಲಕಾಲಕ್ಕೆ ಸರ್ವೆ ಆಹಾರ ಮಾದರಿ, ಕಾನೂನಾತ್ಮಕ ಆಹಾರ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ಸದರಿ ಮಾದರಿಗಳು ಅಸುರಕ್ಷತೆ ಎಂದು ಕಂಡುಬಂದ್ದಲ್ಲಿ ಎಫ್‌ಎಸ್‌ಎಸ್‌ಎ ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ. ರಾಜ್ಯಾದ್ಯಂತ ಜೆ.ಎಂ.ಎಫ್.ಸಿ. ನ್ಯಾಯಾಲಯಗಳಲ್ಲಿ 230 ಪ್ರಕರಣಗಳು ಚಾಲ್ತಿಯಲ್ಲಿರುತ್ತದೆ.<br><br>ಸದರಿ ಕಾರ್ಯಕ್ರಮಗಳಿಗೆ ರಾಜ್ಯ ಸರ್ಕಾರದಿಂದ ಅಧಿಕಾರಿ ಹಾಗೂ ನೌಕರರುಗಳ ವೇತನ ಭತ್ಯೆಗಳಿಗಾಗಿ ರೂ. 2520.26 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದೆ.<br><br>ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.<br><br>ವರ್ಷ — ಕೇಂದ್ರ ಅನುದಾನ(ಲಕ್ಷಗಳಲ್ಲಿ)<br>2020-21 — 259.78<br>2021-22 — 886.63<br>2022-23 — 4372.96<br>2023-24 — 1141.16 |
| (ಇ) | ಜನರಿಗೆ ಆಹಾರ ಸುರಕ್ಷತೆ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇಲ್ಲವಾದಲ್ಲಿ ಪ್ರಸಕ್ತ ಸಾಲಿನಲ್ಲಿ ಅರಿವು ಕಾರ್ಯಕ್ರಮಗಳನ್ನು | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಿಂದ ಐ.ಇ.ಸಿ. ಕಾರ್ಯಕ್ರಮದ ಅಡಿಯಲ್ಲಿ ವಿವಿಧ ಮಾಧ್ಯಮಗಳ ಮೂಲಕ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಖಾಸಗಿ ಟಿ.ವಿ ಚಾನೆಲ್ ಗಳು ಮತ್ತು |

| | | |
|---|---|---|
| | ಹಮ್ಮಿಕೊಳ್ಳಲಾಗುವುದೇ: | ದೂರದರ್ಶನ ಮೂಲಕ ಟಿ.ವಿ. ಸ್ಪಾಟ್‌ಗಳ ಪ್ರಸಾರ, ಸಿನಿಮಾ ಥಿಯೇಟರ್ ಗಳಲ್ಲಿ ಪ್ರಸಾರ, ಆಲ್ ಇಂಡಿಯಾ ರೇಡಿಯೋದಲ್ಲಿ ಫೋನ್ -ಇನ್ ಕಾರ್ಯಕ್ರಮ ಮತ್ತು ಜಿಂಗಲ್ಸ್‌ಗಳ ಪ್ರಸಾರ, ಖಾಸಗಿ ರೇಡಿಯೋ ಚಾನೆಲ್‌ಗಳ ಮೂಲಕ, ಕೆ.ಎಸ್.ಆರ್.ಟಿ.ಸಿ ಬಸ್ ನಿಲಾಣಗಳಲ್ಲಿ ಆಡಿಯೋ ಜಾಹೀರಾತು, ರಾಜ್ಯ ಮಟ್ಟದಲ್ಲಿ ಪತ್ರಿಕಾ ಜಾಹೀರಾತು ರೈಲು ಬೋಗಿಗಳ ಜಾಹೀರಾತು, ಬಸ್ ಶೆಲ್ಟರ್ ಮೂಲಕ ಜಾಗೃತಿ ನೀಡುವ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಆರ್.ಟಿ.ಸಿ ಬಸ್ಸುಗಳ ಮೂಲಕ ಪ್ರಚಾರ, ಜಾಹೀರಾತು ಡಿಜಿಟಲ್ ನಿಯತಕಾಲಿಕೆಗಳು, ದೃಶ್ಯ ಸೃಜನಶೀಲತೆಯ ಪ್ರಸಾರ, ಹೋಡಿಂಗ್ಸ್ ಮತ್ತು ಕರಪತ್ರಗಳು, ಇತ್ಯಾದಿ ಪ್ರಚಾರ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಕಾರ್ಯಕ್ರಮ ರೂಪಿಸಿದ್ದು, ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. |
| (ಈ) | ಆಹಾರ ಕಲಬೆರಿಕೆಯನ್ನು ಪರಿಣಾಮಕಾರಿಯಾಗಿ ತಡೆಯಲು ಕಾನೂನು ತಿದ್ದುಪಡಿ ತರುವ ಉದ್ದೇಶವಿದೆಯೇ? ಇದ್ದಲ್ಲಿ, ಯಾವ ರೀತಿಯ ತಿದ್ದುಪಡಿ ತರಲಾಗುವುದು? | ಆಹಾರ ಕಲಬೆರಿಕೆಯನ್ನು ಪರಿಣಾಮಕಾರಿಯಾಗಿ ತಡೆಯಲು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಗತ್ಯಗಳಿಗನುಸಾರ ತಿದ್ದುಪಡಿಗಳನ್ನು ಮಾಡುತ್ತಿರುತ್ತದೆ. |

**ಆಕುಕ 47 ಎಸ್‌ಬಿವಿ 2024**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**